# ಕವಿತೆ



ಬಿ.ಆರ್.ಲಕ್ಷ್ಮಣರಾವ್
ಕಲೆ: ವಿಶ್ವನಾಥ್ ಎ.ಎಸ್.

## ಎಂಬತ್ತರ ಹೊಸ್ತಿಲಲ್ಲಿ



ಹೌದು,
ಅದೇ ನೀತಿಕತೆಯ
ಅದೇ ವ್ಯಾಮೋಹಿ ಮನುಷ್ಯ
ನಾನು:
ಜೋತು ಬಿದ್ದಿದ್ದೇನೆ
ಇನ್ನೇನು ಯಾವುದೇ ಗಳಿಗೆ
ನನ್ನ ಭಾರಕ್ಕೆ
ಮುರಿದುರುಳಬಹುದಾದ
ಮುದಿ ಮರದ
ಒಣಕೊಂಬೆಯೊಂದನ್ನು
ಎರಡೂ ಕೈಗಳಿಂದ
ಬಿಗಿ ಹಿಡಿದು.

ಕೆಳಗೆ
ತಳ ಕಾಣದ
ಕರಾಳ
ಪಾತಾಳದಾಳದ
ಅಜ್ಞಾತ
ಪ್ರಪಾತ.

ಮೇಲೆ
ಮರದ ಮರೆಕೊಂಬೆಯಿಂದ
ಇಳಿಬಿದ್ದಿದೆ
ಜಗದಂಬೆಯ ತುಂಬು ಮೊಲೆಯಂಥ
ಒಂದು ಜೇನುಹುಟ್ಟು.
ತೊಟ್ಟಿಕ್ಕುತ್ತಿದೆ
ಅದರಿಂದ
ಅಕ್ಕರೆಯ ಜೇನುತುಪ್ಪ.
ನಾಲಿಗೆ ಚಾಚಿ
ಚಪ್ಪರಿಸುತ್ತಿದ್ದೇನೆ, ಅಹಾ!
ತೊಟ್ಟು
ತೊಟ್ಟು,
ಮುಂದಿನ ಗಳಿಗೆಯ ಚಿಂತೆ,
ಅಂತೆಕಂತೆ
ಬದಿಗಿಟ್ಟು.

